ವಾದಿಸುವವಳ ಬಗ್ಗೆ ಅವನಿಗೆ ಅಚ್ಚರಿಯಾಯಿತು. ಆಕೆ ತನ್ನ ಷಂಡತನವನ್ನು ಎತ್ತಿ ತೋರಿಸುತ್ತಿರುವಂತೆ ಅವನಿಗೆ ಭಾಸವಾಯಿತು. ಆದರೂ ಸೋಲೊಪ್ಪಲಿಲ್ಲ. "ನೀನಿರುವ ಚಂದಕ್ಕೆ ಅದು ಬೇರೆ ಕೇಡು" ನಾಟುವಂತೆ ನುಡಿದ. ಅರುಂಧತಿ ಸುಮ್ಮನೆ ನಕ್ಕಳು. ಅವನಿಗೆ ಅವಮಾನವಾದಂತೆ ಅನ್ನಿಸಿ ಸ್ವಲ್ಪ ತಗ್ಗಿದ ದನಿಯಲ್ಲಿ "ಅಲ್ಲ, ನನಗೇನು ಅನ್ನಿಸಬೇಕು? ಮಗಳಾದ್ರೂ ಅಷ್ಟೇ, ಯಾರಾದ್ರೂ ಅಷ್ಟೇ... ಈ ಹೆಂಗಸರ ಹಣೇ ಬರಹವೇ ಅಷ್ಟು. ಚಟ ಇರತ್ತೆ ಹೋಗ್ತಾರೆ. ಆಮೇಲೆ ದೊಡ್ಡ ಸಭ್ಯಸ್ಥರ ಹಾಗೆ ಹುಯಿಲೆಬ್ಬಿಸ್ತಾರೆ" ಲಜ್ಜೆ ಇಲ್ಲದವನಂತೆ ನುಡಿದ. ಮಾತು ಮುಂದುವರೆಯಲಿಲ್ಲ. "ಸದ್ಯ ಮಕ್ಕಳಾಗದೇ ಹೋದದ್ದು ಒಳ್ಳೆಯದಾಯಿತು" ಎಂದು ಮೊದಲ ಬಾರಿಗೆ ಅರುಂಧತಿಗೆ ಅನ್ನಿಸಿತು.

ತಿಂಗಳುಗಳು ಕಳೆದು ಹೋದವು. ಅರುಂಧತಿ ಬಿಡದೆ ಮಧುವಂತಿಯಿಂದ ಎಸಿಗೆ, ಡಿಸಿಗೆ ಅಂತೆಲ್ಲ ಪತ್ರ ಬರೆಸಿದಳು. ಉತ್ತರಗಳು ಬಂದವಾದರೂ ಮತ್ತೆ ಅದೇ ಎಳೆಗಳು, 'ತನಿಖೆ ಮುಂದುವರೆಯುತ್ತಿದೆ' ಈ ಮಧ್ಯೆ ಮಣಿವೇಲು ಆ ಹುಡುಗನ ಕಡೆಯವರಿಗೆ ಒತ್ತಾಸೆಯಾಗಿ ನಿಂತು ಹಣ ಪಡೆದು ಮಧುವಂತಿಯ ಕೇಸನ್ನು ಸೋಲಿಸುವುದಕ್ಕೆ ಎಲ್ಲ ಸಿದ್ಧತೆ ಮಾಡಿಕೊಂಡದ್ದು ಖುದ್ದು ಹನುಮಕ್ಕನೇ ಬಂದು ಹೇಳಿದಳು. ಅಲ್ಲದೇ ಆ ಹುಡುಗನಿಗೆ ಮದುವೆ ನಿಶ್ಚಯವಾದದ್ದರ ಕುರಿತೂ ಹೇಳಿದಳು. ಅರುಂಧತಿ, ಹನುಮಕ್ಕ, ಅವನಿಗೆ ನಿಶ್ಚಯವಾದ ಹುಡುಗಿಯ ಮನೆಗೂ ಹೋಗಿ ಬಂದರಾದರೂ ಪ್ರಯೋಜನವಾಗಲಿಲ್ಲ. "ಅಯ್ಯೋ ಹುಡುಗು ಬುದ್ಧಿ ಮಾಡಿದ್ದಾನೆ, ಹೋಗ್ಲೀ ಮೊದಲು ಅವಳಿಗೆ ತಲೆ ಸರಿ ಇರಬೇಕಿತ್ತು. ಹೆಂಗಸಿಗೆ ಇಲ್ಲದ ನಾಚಿಕೆ ಅವನಿಗಿರತ್ತಾ? ಅದೂ ಅಲ್ದೆ ದುಡ್ಡಿದ್ದವರ ಹಿಂದೆ ಇಂತಹವರು ಬೀಳೋದು ಮಾಮೂಲಿ ಬಿಡಿ" ಎಂದು ಅವರು ಮುಖಕ್ಕೆ ಹೊಡೆದವರಂತೆ ನುಡಿದಾಗ ಹನುಮಕ್ಕ ತಲೆ ಸುತ್ತಿ ಬಿದ್ದಿದ್ದಳು.

ಮತ್ತೆ ಮಧುವಂತಿ ಬರಲಿಲ್ಲ. ಒಂದೆರಡು ಬಾರಿ ಅರುಂಧತಿಯೇ ಅವರ ಮನೆಯ ಬಳಿಗೆ ಹೋದಾಗಲೂ ಕಣ್ಣು ತಪ್ಪಿಸಿದ್ದಳು. ಹನುಮಕ್ಕ ಕೂಡ ಕೈ ಮುಗಿದು "ಅಮ್ಮ ನೀವು ಇಲ್ಲೆಲ್ಲ ಬರಬಾರದು. ಸಾಹೇಬರಿಗೆ ಗೊತ್ತಾದ್ರೆ..." ಬೆದರಿ ನುಡಿದಿದ್ದಳು. ಅರುಂಧತಿ ಇದೀಗ ಮಣಿವೇಲುಯೊಂದಿಗೆ "ತಿಂಡಿ, ಊಟ" ಎನ್ನುವಂತಹ ಮಾತನ್ನೂ ಕೂಡ ಪೂರ್ತಿಯಾಗಿ ನಿಲ್ಲಿಸಿದ್ದಳು. ಬದಲಾಗಿ ಈ ಕೇಸನ್ನು ಹೇಗಾದರೂ ಮಾಡಿ ಗೆಲ್ಲಲೇಬೇಕೆಂಬ ಹುಚ್ಚು ಕುದುರೆಯೊಂದು ಅವಳನ್ನು ಅಟ್ಟಾಡಿಸುತ್ತಲೇ ಇತ್ತು...

ಅದಾಗಿ ಸ್ವಲ್ಪ ದಿನ ಕಳೆದಿರಬೇಕಷ್ಟೇ. ಮಣಿ ದಡಗುಟ್ಟುತ್ತಲೇ ಬಂದ. ಮುಖದಲ್ಲಿ ಕೋಪವಿತ್ತೋ ಸೋಲಿತ್ತೋ ಅರುಂಧತಿಗೆ ಗೊತ್ತಾಗಲಿಲ್ಲ. ಆದರೆ ಬಂದವನೇ "ಹನುಮಕ್ಕ ಆ ಹುಡುಗನ ಕೊಲೆ ಮಾಡಿದ್ದಾಳೆ. ಅವಳ ಪರವಾಗಿ ಸುತ್ತುತ್ತಿದ್ದೆಯಲ್ಲ, ಈಗ ಪೊಲೀಸಿನವರಿಗೆ ಅದೇನು ಹೇಳ್ತೀಯೋ ಹೇಳು" ಬೆದರಿಸುವವನಂತೆ ನುಡಿದು ಹೊಸ್ತಿಲಿನಿಂದ ಹೊರ ತಳ್ಳಿದ. ಅರುಂಧತಿಗೆ ಮೊಟ್ಟ ಮೊದಲ ಬಾರಿಗೆ ಭಯವಾಗಲಿಲ್ಲ.


**ದೀಪ್ತಿ ಭದ್ರಾವತಿ**

ಭದ್ರಾವತಿಯಲ್ಲಿ ನೆಲೆಸಿರುವ ದೀಪ್ತಿ 'ಆ ಬದಿಯ ಹೂವು' ಕಥಾ ಸಂಕಲನ ಹಾಗೂ 'ಕಾಗದದ ಕುದುರೆ', 'ಗ್ರೀನ್ ರೂಮಿನಲ್ಲಿ' ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ನಾಟಕ ಅಭಿನಯ, ಯಕ್ಷಗಾನ, ತಾಳಮದ್ದಲೆ ಅವರ ಆಸಕ್ತಿಯ ಕ್ಷೇತ್ರಗಳು.